2016 ಕ.ತೀ.ವ 142

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

### ಶ್ರೀ ಪಿ.ಎನ್. ಮುನಿಸ್ವಾಮಪ್ಪ ಮತ್ತು ಇತರರು –ವಿರುದ್ಧ– ಶ್ರೀ ಮೂರ್ತಿ*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರ ಅಡಿಯಲ್ಲಿ ರಿಟ್ ಅರ್ಜಿ.

ರಿಟ್ ಅರ್ಜಿದಾರರು ಎದುರುದಾರರ ವಿರುದ್ಧ ಅಧಿವಿಚಾರಣಾ ನ್ಯಾಯಾಲಯದಲ್ಲಿ ಹೂಡಿದ ದಾವೆಯಲ್ಲಿ ಮೊದಲನೇ ರಿಟ್ ಅರ್ಜಿದಾರರು ತಮ್ಮ ಸಾಕ್ಷಿಯನ್ನು ನೀಡಿ ನಿಶಾನೆ–13 ಪಾಲು ಪಟ್ಟಿಯನ್ನು ಹಾಜರುಪಡಿಸಿರುತ್ತಾರೆ. ಎದುರುದಾರರು ನಿಶಾನೆ–13ನ್ನು ನೋಂದಾಯಿಸದೆ ಸೂಕ್ತ ಸ್ಟ್ಯಾಂಪ್ ಶುಲ್ಕವನ್ನು ಕಟ್ಟಿರದ ಕಾರಣ ಆ ದಾಖಲೆಯನ್ನು ನ್ಯಾಯಾಲಯವು ಅಂಗೀಕರಿಸಲು ಆಗುವುದಿಲ್ಲವೆಂದು ತಕರಾರು ಸಲ್ಲಿಸಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಲಾಗಿ, ಅಧಿವಿಚಾರಣಾ ನ್ಯಾಯಾಲಯವು ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ಹೊರಡಿಸಿದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಈ ಹಿಂದೆ ಎದುರುದಾರರು ಸಲ್ಲಿಸಿದ ರಿಟ್ ಅರ್ಜಿಯನ್ನು ಪುರಸ್ಕರಿಸಿದ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಎದುರುದಾರರಿಗೆ ತಕರಾರು ಸಲ್ಲಿಸಲು ಅವಕಾಶ ನೀಡಿದ ಅಧಿವಿಚಾರಣಾ ನ್ಯಾಯಾಲಯವು ಸೂಕ್ತವಾಗಿಯೇ ಈ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಿದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

*1. ರಿಟ್ ಅರ್ಜಿ ಸಂಖ್ಯೆ 2882/2003, ದಿನಾಂಕ 14–7–2013*
*ಕೃಷ್ಣ –ವಿರುದ್ಧ– ಸಂಜೀವ್* *(ಉಲ್ಲೇ) 5*

*ರಿಟ್ ಅರ್ಜಿ ಸಂಖ್ಯೆ: 15727/2013 (ಜಿಎಂ–ಸಿಪಿಸಿ), ದಿನಾಂಕ: 13ನೇ ಏಪ್ರಿಲ್, 2015.

ಅರ್ಜಿದಾರರ ಪರ: ಶ್ರೀ ಜಿ.ಎಸ್. ಭಟ್, ವಕೀಲರು ಇವರೊಂದಿಗೆ ಶ್ರೀ ಪಿ.ಟಿ. ಮುರಳೀಧರ್, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀಮತಿ ಸ್ನೇಹ ಶಾಸ್ತ್ರಿ ಜಿ, ವಕೀಲರ ಪರವಾಗಿ ಶ್ರೀ ಜಿ. ಬಾಲಕೃಷ್ಣ ಶಾಸ್ತ್ರಿ, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ:**

ಚಿಕ್ಕಬಳ್ಳಾಪುರ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯದ ಕಡತದ ಮೇಲೆ ಮೂ.ದಾ.ನಂ.306/1997ರಲ್ಲಿ ಐ.ಎ. ನಂ.9ರಲ್ಲಿನ ದಿನಾಂಕ 12.3.2013ರ ಆದೇಶಗಳನ್ನು ಪ್ರಶ್ನಿಸಿ, ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

2. ಈ ಪ್ರಕರಣದ ಸಂಕ್ಷಿಪ್ತವಾದ ಸಂಗತಿಗಳೆಂದರೆ, ಅರ್ಜಿದಾರರು ಘೋಷಣೆ ಮತ್ತು ನಿರ್ಬಂಧಕಾಜ್ಞೆಗಾಗಿ ಮೂ.ದಾ.ಸಂ.306/1997ನ್ನು ಸಲ್ಲಿಸಿದ್ದಾರೆ. 1ನೇ ಅರ್ಜಿದಾರನನ್ನು ಪ್ರಾ.ಸಾ. 1 ಎಂಬುದಾಗಿ ಪರೀಕ್ಷಿಸಲಾಗಿದೆ ಮತ್ತು ನಿಶಾನೆ ಪಿ.1 ರಿಂದ ಪಿ.26ರ ವರೆಗೆ ಹಾಜರುಪಡಿಸಲಾಗಿದೆ. ನಿಶಾನೆ ಪಿ.13 ಪಾಲು ಪತ್ರವಾಗಿದೆ. ಪಾಲುಪತ್ರ/ಬಿಟ್ಟುಕೊಡುವ ಪತ್ರ ಅಂದರೆ ನಿಶಾನೆ ಪಿ.13 ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲದ ಕಾರಣ, ಪ್ರಾ.ಸಾ. 1ರ ಮುಖ್ಯ ವಿಚಾರಣೆಯಲ್ಲಿ ಪ್ರಾ.ಸಾ.1ರ ಸಾಕ್ಷ್ಯವನ್ನು ಬಿಟ್ಟುಬಿಡಲು /ತೆಗೆದು ಹಾಕಲು 6ನೇ ಪ್ರತಿವಾದಿ ಪ್ರತ್ಯರ್ಜಿದಾರನು ಐ.ಎ.ಸಂ.9ನ್ನು ಸಲ್ಲಿಸಿದ್ದಾನೆ. ಸದರಿ ಅರ್ಜಿಯನ್ನು ಅಧಿವಿಚಾರಣಾ ನ್ಯಾಯಾಲಯವು ದಿನಾಂಕ 21.08.2009ರಂದು ತಿರಸ್ಕರಿಸಿದ್ದು, ಅದರ ವಿರುದ್ಧ ಪ್ರತ್ಯರ್ಜಿದಾರನು ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂಖ್ಯೆ 34362/2009ನ್ನು ಸಲ್ಲಿಸಿರುತ್ತಾನೆ. ಈ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯದಿಂದ ಹೊರಡಿಸಲಾದ ಆದೇಶವನ್ನು ಬದಿಗಿರಿಸಿ, ರಿಟ್ ಅರ್ಜಿಯನ್ನು 10.11.2010ರಂದು ಪುರಸ್ಕರಿಸಿದೆ ಹಾಗೂ ಪ್ರಶ್ನೆಯಲ್ಲಿರುವ ದಾಖಲೆಯು ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲ ಎಂದು ಮತ್ತು ಆ ಕಾರಣದಿಂದ ಅದನ್ನು ಸಾಕ್ಷ್ಯವಾಗಿ ಗುರುತಿಸಲು ಆಗುವುದಿಲ್ಲವೆಂದು

ಸಾಬೀತುಮಾಡಲು ಅರ್ಜಿದಾರನಿಗೆ ಅವಕಾಶ ನೀಡಿದ ನಂತರ ಹೊಸದಾಗಿ ಐ.ಎ.ಸಂ.9ರಲ್ಲಿ ಮಾಡಲಾದ ಕೋರಿಕೆಯನ್ನು ಪರಿಶೀಲಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ. ಈ ನ್ಯಾಯಾಲಯವು ಹೊರಡಿಸಿದ ಸದರಿ ಆದೇಶವನ್ನನುಸರಿಸಿ, ಅಧಿವಿಚಾರಣಾ ನ್ಯಾಯಾಲಯವು, ದಾಖಲೆಯನ್ನು ಅಂದರೆ, ಪಾಲುಪತ್ರ/ಬಿಟ್ಟುಕೊಡುವ ಪತ್ರವನ್ನು ಕಡ್ಡಾಯ ನೋಂದಣಿ ಮಾಡಿಸುವ ಅಗತ್ಯವಿರುತ್ತದೆಂದು ಮತ್ತು ಅದಕ್ಕೆ ಯುಕ್ತವಾಗಿ ಸ್ಟ್ಯಾಂಪು ಹಚ್ಚಬೇಕಿರುತ್ತದೆಂದೂ, ಈ ಎಲ್ಲವನ್ನು ಮಾಡದಿದ್ದರೆ, ಅದು ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲವೆಂದು ತೀರ್ಮಾನಿಸಿ, ವಿಷಯವನ್ನು ಮತ್ತೊಮ್ಮೆ ಹೊಸದಾಗಿ ಪರಿಗಣಿಸಿದೆ ಮತ್ತು ಐ.ಎ. ಸಂಖ್ಯೆ 9 ನ್ನು ಪುರಸ್ಕರಿಸಿದೆ. ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ದಿನಾಂಕ 12.3.2013ರ ಈ ಆದೇಶವನ್ನು ಈ ರಿಟ್ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

3. ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದೆ.

4. ಅರ್ಜಿದಾರನ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಜಿ.ಎಸ್. ಭಟ್‌ರವರು, ಒಂದು ಸಲ ನ್ಯಾಯಾಲಯವು ಸರಿಯಾಗಿ ಅಥವಾ ತಪ್ಪಾಗಿ, ದಾಖಲೆಯನ್ನು ಸಾಕ್ಷ್ಯವಾಗಿ ಅಂಗೀಕರಿಸಲು ನಿರ್ಧರಿಸಿದರೆ, ಮತ್ತೆ ವಿಷಯವನ್ನು ಪುನಃ ಆರಂಭಿಸಲು ಮತ್ತು ಸಾಕ್ಷ್ಯವಾಗಿ ದಾಖಲೆಯ ಅಂಗೀಕಾರಾರ್ಹತೆಗೆ ಸಂಬಂಧಿಸಿದಂತೆ ವಿಷಯವನ್ನು ಪುನಃ ನಿರ್ಧರಿಸಲು ನ್ಯಾಯಾಲಯಕ್ಕೆ ಯಾವುದೇ ಅಧಿಕಾರವಿಲ್ಲವೆಂದು ಭಾವಾವೇಶದಿಂದ ವಾದಿಸಿದ್ದಾರೆ. ಈ ನ್ಯಾಯಾಲಯವು ಅರ್ಜಿದಾರನಿಗೆ ಅವಕಾಶ ನೀಡಿದ ನಂತರ ಹೊಸದಾಗಿ ಐ.ಎ.ಸಂಖ್ಯೆ 9ನ್ನು ಮರು ಪರಿಗಣಿಸಲು ಮಾತ್ರವೇ ವಿಷಯವನ್ನು ಪುನರ್ವಿಚಾರಣೆಗಾಗಿ ವಾಪಸ್ಸು ಕಳಿಸಲಾಗಿದೆ ಮತ್ತು ಪ್ರತ್ಯರ್ಜಿದಾರನು ಸಲ್ಲಿಸಿದ ಅರ್ಜಿಯನ್ನು ಪುನಃ ಪರ್ಯಾಲೋಚಿಸುವಾಗ ಅಧಿವಿಚಾರಣಾ ನ್ಯಾಯಾಲಯವು ತನ್ನ ಆದೇಶವನ್ನು ಪುನರವಲೋಕಿಸುವಲ್ಲಿ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದೆಯೆಂದು ವಾದಿಸಲಾಗಿದೆ ಹಾಗೂ ಈ ಮುಂದಿನ ತೀರ್ಪುಗಳ ಮೇಲೆ ಅವಲಂಬಿಸಲಾಗಿದೆ:

(1) ಎಐಆರ್ 1961 ಎಸ್‌ಸಿ 1655 (ಜಾವೆರ್ ಚಂದ್ ಮತ್ತು ಇತರರು –ವಿರುದ್ಧ– ಪುಖ್‌ರಾಜ್ ಸುರಾನ)

(2) ಎಐಆರ್ 2007 ಎಸ್‌ಎಸಿ 637 (ಶ್ಯಾಮಲ್ ಕುಮಾರ್ ರಾಯ್ –ವಿರುದ್ಧ– ಸುಶೀಲ್ ಕುಮಾರ್ ಅಗರ್‌ವಾಲ್)

(3) ಎಐಆರ್ 2011 ಕೆಎಆರ್ 128(ಎಚ್.ಕೃಷ್ಣಪ್ಪ –ವಿರುದ್ಧ– ಎಂ.ಡಿ. ಅಶ್ವಥನಾರಾಯಣ್ ಸಿಂಗ್)

(4) ಐಎಲ್‌ಆರ್ 2011 ಕೆಎಆರ್ 2017 (ಮೆಸರ್ಸ್ ಕೇವ್ ಕ್ಯಾಟರರ್ಸ್ ಪ್ರೈವೇಟ್ ಲಿಮಿಟೆಡ್ –ವಿರುದ್ಧ– ಮೆಸರ್ಸ್ ಸುಧಾ ಎಂಟರ್‌ಪ್ರೈಸಸ್)

5. ಇದಕ್ಕೆ ವಿರುದ್ಧವಾಗಿ, ಪ್ರತ್ಯರ್ಜಿದಾರನ ಪರ ಹಾಜರಾದ ಶ್ರೀಮತಿ ಸ್ನೇಹ ಶಾಸ್ತ್ರಿಯವರು ಅಧಿವಿಚಾರಣಾ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ಸಮರ್ಥಿಸಿದ್ದಾರೆ ಮತ್ತು ***ಕೃಷ್ಣ –ವಿರುದ್ಧ– ಸಂಜೀವ್***[1], ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ.

6. ಪಕ್ಷಕಾರರ ಮಾನ್ಯ ವಕೀಲರ ವಾದವನ್ನು ಆಲಿಸಿದ ಮತ್ತು ದಾಖಲೆಯಲ್ಲಿನ ವಿಷಯ ಸಾಮಗ್ರಿಯನ್ನು ಅವಲೋಕಿಸಿದ ನಂತರ 28.7.2003ರಂದು ಹಾಜರುಪಡಿಸಲಾಗಿದ್ದ ದಾಖಲೆ–ನಿಶಾನೆ.ಪಿ.13 ಆದ ಪಾಲುಪತ್ರ/ಬಿಟ್ಟುಕೊಡುವ ಪತ್ರವನ್ನು ಗುರುತಿಸುವ ಸಮಯದಲ್ಲಿ ಪ್ರತ್ಯರ್ಜಿದಾರನಿಗೆ ಯಾವುದೇ ಅವಕಾಶ ನೀಡಿರಲಿಲ್ಲವೆಂದು ವಾದಿಸಿ ಪ್ರತ್ಯರ್ಜಿದಾರನು ಸಲ್ಲಿಸಿದ ಅರ್ಜಿ ಕುರಿತಂತೆ, ಅಧಿವಿಚಾರಣಾ ನ್ಯಾಯಾಲಯವು ಅರ್ಜಿಯನ್ನು ವಜಾ ಮಾಡಿದೆ ಮತ್ತು ಅದನ್ನು ಪ್ರತ್ಯರ್ಜಿದಾರನು ರಿಟ್ ಅರ್ಜಿ ಸಂಖ್ಯೆ 34362/2009ರಲ್ಲಿ ಈ ನ್ಯಾಯಾಲಯದ

1. ರಿಟ್ ಅರ್ಜಿ ಸಂಖ್ಯೆ 29882/2003 ದಿನಾಂಕ 14.7.2003

ಮುಂದೆ ಪಟ್ಟು ಹಿಡಿದು ವಾದಿಸಿದ್ದಾನೆಂಬುದು ಸ್ಪಷ್ಟವಾಗಿದೆ ಹಾಗೂ ಈ ನ್ಯಾಯಾಲಯವು, ದಿನಾಂಕ 10.11.2010ರ ಆದೇಶದ ಮೂಲಕ ಈ ಮುಂದಿನಂತೆ ತೀರ್ಮಾನಿಸಿದೆ:

*"5. ಪಕ್ಷಕಾರರ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಗಿದೆ ಮತ್ತು ಪಕ್ಷಕಾರರು ಅವಲಂಬಿಸಿದ ತೀರ್ಪುಗಳು ಸೇರಿದಂತೆ ದಾಖಲೆಯಲ್ಲಿರುವ ವಿಷಯ ಸಾಮಗ್ರಿಗಳ ಎಚ್ಚರಿಕೆಯ ಪರಿಶೀಲನೆ ಆಧಾರದ ಮೇಲೆ, ದಿನಾಂಕ 14.07.2003ರಂದು ದಾಖಲೆಗಳ ಹಾಜರುಪಡಿಸುವಿಕೆಯಲ್ಲಿ ಆದ ವಿಳಂಬವನ್ನು ಮನ್ನಾ ಮಾಡುವ ಮೂಲಕ, ದಾಖಲೆಗಳ ಹಾಜರುಪಡಿಸುವಿಕೆಗಾಗಿ ವಾದಿಗಳು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ. ಅದೇ ದಿನದಂದು, ವಾದಿಯ ಅಫಿಡವಿಟ್ ಸಾಕ್ಷ್ಯವನ್ನು ಸ್ವೀಕರಿಸಲಾಗಿದೆ ಮತ್ತು ರೂ.5ರ ಸ್ಟ್ಯಾಂಪ್ ಕಾಗದದ ಮೇಲೆ ಬರೆದ ದಾಖಲೆಯಾದ ನಿಶಾನೆ ಪಿ.13 ಸೇರಿದಂತೆ ದಾಖಲೆಗಳನ್ನು ಗುರುತಿಸಲಾಗಿದೆ ಎಂಬುದನ್ನು ನಾನು ತಿಳಿಸಿದ್ದೇನೆ. ಪ್ರತಿವಾದಿ ಸಂಖ್ಯೆ 6– ಅರ್ಜಿದಾರನನ್ನು ಇದರಲ್ಲಿ ಎಸ್.ಎಸ್.ಎಂಬ ಹೆಸರಿನ ವಕೀಲರು ಅಧಿವಿಚಾರಣಾ ನ್ಯಾಯಾಲಯದಲ್ಲಿ ಪ್ರತಿನಿಧಿಸಿದ್ದರು. ಅರ್ಜಿಯನ್ನು ಪುರಸ್ಕರಿಸಿದಾಗ ಹಾಗೂ ದಾಖಲೆಗಳನ್ನು ಗುರುತಿಸಿದಾಗ ಪ್ರತಿವಾದಿ ಸಂಖ್ಯೆ 6ರ ಪರ ವಕೀಲರು ಹಾಜರಿದ್ದರೆಂದು ತೋರಿಸುವ ಯಾವುದೇ ಸಾಕ್ಷ್ಯವಿಲ್ಲ. ಅಧೀನ ನ್ಯಾಯಾಲಯವು ನಿಶಾನೆ. ಪಿ.13 ದಾಖಲೆಯ ಅಂಗೀಕಾರಾರ್ಹತೆಗೆ ತನ್ನ ವಿವೇಚನೆಯನ್ನು ಬಳಸಿದೆಯೆಂಬುದನ್ನು ತೋರಿಸಲು ಸಹ ಯಾವುದೇ ವಿಷಯ ಸಾಮಗ್ರಿಯಿಲ್ಲ. ಇನ್ನೊಬ್ಬ ಪಕ್ಷಕಾರನು ಯಾವುದೇ ಆಕ್ಷೇಪಣೆಯೆತ್ತದೆ ದಾಖಲೆಯನ್ನು ಸಾಕ್ಷ್ಯವಾಗಿ ಒಂದು ಸಲ ಗುರುತಿಸಲಾಗಿದೆಯೆಂದು ಸುಸ್ಥಾಪಿತವಾಗಿದ್ದರೂ ಅದರ ಅಂಗೀಕಾರಾರ್ಹತೆಯನ್ನು ಒಂದು ವಿವಾದವಾಗಿ ಆ ನಂತರ ಪ್ರಶ್ನಿಸಲಾಗುವುದಿಲ್ಲ. ಈಗಿನ ಪ್ರಕರಣದ ಸಂಗತಿಗಳು ಹಾಗೂ*

*ಸಂದರ್ಭಗಳಲ್ಲಿ, ದಿನಾಂಕ 14.07.2003ರಂದು ವಾದಿಯು ಅರ್ಜಿ ಸಲ್ಲಿಸುವ ಮೂಲಕ ದಾಖಲೆಗಳನ್ನು ವಿಳಂಬವಾಗಿ ಸಲ್ಲಿಸಿರುವನೆಂಬುದು ಮತ್ತು ಅದನ್ನು ಅದೇ ದಿನದಂದು ಪುರಸ್ಕರಿಸಲಾಯಿತೆಂಬುದು ಸ್ಪಷ್ಟವಾಗಿದೆ. ಅಫಿಡೆವಿಟ್ ಸಾಕ್ಷ್ಯವನ್ನು ಅದೇ ದಿನ ಸ್ವೀಕರಿಸಲಾಗಿದೆ ಮತ್ತು ಪ್ರಶ್ನೆಯಲ್ಲಿರುವ ದಾಖಲೆ ಸೇರಿದಂತೆ ಎಲ್ಲಾ ದಾಖಲೆಗಳನ್ನು ಗುರುತಿಸಲಾಗಿದ್ದು, ಪ್ರಶ್ನೆಯಲ್ಲಿರುವ ದಾಖಲೆ ಅಂಗೀಕಾರಾರ್ಹವಲ್ಲವೆಂಬುದನ್ನು ಗಮನಿಸಿದ ನಂತರ ತದನುಸಾರವಾಗಿ ಅದನ್ನು ಆಕ್ಷೇಪಿಸಲಾಗಿದೆ. ಪ್ರತಿವಾದಿ ಸಂಖ್ಯೆ.6– ಅರ್ಜಿದಾರನ ಪರ ವಕೀಲರು ದಾಖಲೆಗಳನ್ನು ಗುರುತಿಸುವಾಗ ಹಾಜರಿದ್ದರು ಹಾಗೂ ದಾಖಲೆಯನ್ನು ಗುರುತಿಸುವುದಕ್ಕೆ ಯಾವುದೇ ಆಕ್ಷೇಪಣೆ ಮಾಡಲಿಲ್ಲವೆಂಬುದನ್ನು ತೋರಿಸಲು ಯಾವುದೇ ವಿಷಯ ಸಾಮಗ್ರಿ ಇಲ್ಲದಿದ್ದಾಗ, ಅಧೀನ ನ್ಯಾಯಾಲಯವು, ಆ ನಂತರ ದಿನಾಂಕ 28.08.2003ರಂದು ಕೂಡಲೇ ಸಲ್ಲಿಸಲಾದ ಐ.ಎ.ಸಂಖ್ಯೆ 9 ನ್ನು ಪರಿಗಣಿಸುವ ಮೂಲಕ ಈ ದಾಖಲೆಯನ್ನು ಗುರುತಿಸುವುದಕ್ಕೆ ಆಕ್ಷೇಪಣೆ ಮಾಡಲು ಅರ್ಜಿದಾರರಿಗೆ ಅವಕಾಶ ನೀಡಲೇಬೇಕಿತ್ತು."*

7. ಪ್ರತ್ಯರ್ಜಿದಾರನು ದಾಖಲೆಯನ್ನು ಗುರುತಿಸುವುದಕ್ಕೆ ಆಕ್ಷೇಪಣೆ ಮಾಡುವ ಅವಕಾಶದಿಂದ ವಂಚಿತನಾಗಿದ್ದಾನೆಂಬ ನಿರ್ಣಯಕ್ಕೆ ಬಂದಿದ್ದು, ಈ ನ್ಯಾಯಾಲಯವು ಅದರಲ್ಲಿನ ಪ್ರಶ್ನಿತ ಆದೇಶವನ್ನು ಬದಿಗಿರಿಸಿದೆ ಮತ್ತು ಪ್ರಶ್ನೆಯಲ್ಲಿರುವ ದಾಖಲೆಯು ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲ ಮತ್ತು ಆ ಕಾರಣದಿಂದ ಅದನ್ನು ಸಾಕ್ಷ್ಯವಾಗಿ ಗುರುತಿಸಲಾಗುವುದಿಲ್ಲವೆಂಬುದನ್ನು ತೋರಿಸಲು ಅರ್ಜಿದಾರನಿಗೆ ಅವಕಾಶ ನೀಡಿದ ನಂತರ ಮತ್ತೊಮ್ಮೆ ಐ.ಎ.ಸಂಖ್ಯೆ 9ರ ಮೇಲೆ ಮಾಡಲಾದ ಕೋರಿಕೆಯನ್ನು ಪರಿಶೀಲಿಸಲು ಅಧೀನ ನ್ಯಾಯಾಲಯಕ್ಕೆ ನಿರ್ದೇಶಿಸಿದೆ. ಈ ನ್ಯಾಯಾಲಯವು ನೀಡಿದ ಸದರಿ ನಿರ್ದೇಶನಗಳ ಬೆಳಕಿನಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಎರಡೂ ಪಕ್ಷಕಾರರಿಗೆ ಸಾಕಷ್ಟು ಅವಕಾಶ ಒದಗಿಸಿದ ನಂತರ ಮತ್ತು ಎರಡೂ ಕಡೆಗಳಲ್ಲಿ ಮುಂದುವರಿದ ವಾದಗಳನ್ನು ಪರಿಗಣಿಸಿ, ಪಾಲುಪತ್ರ/ಬಿಟ್ಟುಕೊಡುವ

ಪತ್ರದಲ್ಲಿನ ಒಕ್ಕಣೆಯು, ಸದರಿ ದಾಖಲೆಯು ಪಾಲುಪತ್ರವಾಗಿದೆ ಹಾಗೂ ಸಂಬಂಧಪಟ್ಟ ಪಕ್ಷಕಾರನು ತನ್ನ ಸ್ವತ್ತುಗಳ ಮೇಲಿನ ಪಾಲನ್ನು ಬಿಟ್ಟುಕೊಟ್ಟಿದ್ದಾನೆಂಬುದನ್ನು ತೋರಿಸುತ್ತದೆ ಮತ್ತು ಭಾರತ ನೋಂದಣಿ ಅಧಿನಿಯಮದ 17ನೇ ಪ್ರಕರಣದ ಅನುಸಾರ, ಸ್ಥಿರಾಸ್ತಿಯಲ್ಲಿ ಹಕ್ಕು, ಸ್ವಾಮ್ಯ ಅಥವಾ ರೂ.100/– ಮತ್ತು ಇನ್ನೂ ಮುಂದಕ್ಕೆ ಮೌಲ್ಯದ ಮೇಲೆ ಬಡ್ಡಿಯನ್ನು ಸೃಜಿಸಲು/ಘೋಷಿಸಲು/ ವಹಿಸಲು/ ಮಿತಿಗೊಳಿಸಲು ಅಥವಾ ಅಂತ್ಯಗೊಳಿಸಲು ಕಾರ್ಯ ನಿರ್ವಹಿಸುವ ದಾಖಲೆಗೆ ಕಡ್ಡಾಯ ನೋಂದಣಿಯನ್ನು ಅಗತ್ಯಪಡಿಸುತ್ತದೆ ಮತ್ತು ಸದರಿ ಉಪಬಂಧದ ಅನುಸಾರ ಪಾಲುಪತ್ರ/ಬಿಟ್ಟುಕೊಡುವ ಪತ್ರಕ್ಕೆ ಅತ್ಯವಶ್ಯಕವಾಗಿ ನೋಂದಣಿಯನ್ನು ಅಗತ್ಯಪಡಿಸಲಾಗಿದೆ. ರೂ.4.50ರ ಸ್ಟ್ಯಾಂಪ್ ಕಾಗದದ ಮೇಲೆ ಬರೆಯಲಾದ ಸದರಿ ದಾಖಲೆಯು, ಅದನ್ನು ಸಾಕಷ್ಟಿರದ ಸ್ಟ್ಯಾಂಪ್ ಕಾಗದದ ಮೇಲೆ ಬರೆಯಲಾಗಿತ್ತೆಂದು ಸುಸ್ಥಾಪಿತವಾಗಿದ್ದು, ಅದು ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲ ಎಂದು ಅಭಿಪ್ರಾಯಪಡಲಾಗಿದೆ.

8. ***ಕೃಷ್ಣ –ವಿರುದ್ಧ– ಸಂಜೀವ್*** (ಮೇಲೆ ಹೇಳಿದ) ಪ್ರಕರಣದಲ್ಲಿ ಈ ನ್ಯಾಯಾಲಯವು "ದಾಖಲೆಯನ್ನು ಗುರುತಿಸುವುದು ಲಿಪಿಕ ಕಾರ್ಯವಾಗಿದ್ದು, ಇದರಿಂದ ದಾಖಲೆಯನ್ನು ಸಾಕ್ಷ್ಯವಾಗಿ ಅಂಗೀಕರಿಸುವುದು ನ್ಯಾಯಿಕ ಕಾರ್ಯವಾಗಿದೆ. ದಾಖಲೆಯನ್ನು ಸಾಕ್ಷ್ಯವನ್ನಾಗಿ ಹಾಜರುಪಡಿಸುವ ಮುಂಚೆ ಅದು ಸಾಕ್ಷ್ಯವಾಗಿ ಅಂಗೀಕಾರಾರ್ಹವೆ? ಅಥವಾ ಅಲ್ಲವೇ? ಎಂಬ ಪ್ರಶ್ನೆಯ ನ್ಯಾಯಿಕ ನಿರ್ಧಾರವನ್ನು ಮಾಡತಕ್ಕದ್ದು. ಅದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ದಾಖಲೆಯನ್ನು ಅಂಗೀಕರಿಸುವ ನ್ಯಾಯಾಲಯವು, ಆ ದಾಖಲೆಯು ಅಂಗೀಕಾರಾರ್ಹವೆ? ಅಥವಾ ಅಲ್ಲವೆ? ಎಂಬ ಪ್ರಶ್ನೆಗೆ ಪ್ರಜ್ಞಾಪೂರ್ವಕವಾಗಿ ತನ್ನ ವಿವೇಚನೆಯನ್ನು ಬಳಸಬೇಕು" ಎಂದು ಸ್ಪಷ್ಟವಾಗಿ ತೀರ್ಮಾನಿಸಿದೆ.

9. ಈ ನ್ಯಾಯಾಲಯದಿಂದ ಸ್ಪಷ್ಟವಾಗಿ ನಿರೂಪಿಸಲಾದ ಕಾನೂನಿನ ಸದರಿ ನಿಯಮಗಳನ್ನು ಅನ್ವಯಿಸಿ, ಮಾನ್ಯ ನ್ಯಾಯಾಧೀಶರು ರಿಟ್ ಅರ್ಜಿ ಸಂಖ್ಯೆ 34362/2009 ದಿನಾಂಕ 10.11.2011ರಲ್ಲಿ ಅಧಿವಿಚಾರಣಾ ನ್ಯಾಯಾಧೀಶರಿಂದ

ಹೊರಡಿಸಲಾದ ಆದೇಶವನ್ನು ಬದಿಗಿರಿಸಿದ್ದಾರೆ ಮತ್ತು ಪ್ರಶ್ನೆಯಲ್ಲಿರುವ ದಾಖಲೆಯು ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲ ಮತ್ತು ಆದ್ದರಿಂದ, ಅದನ್ನು ಸಾಕ್ಷ್ಯದಲ್ಲಿ ಗುರುತಿಸಲಾಗುವುದಿಲ್ಲ ಎಂಬುದನ್ನು ತೋರಿಸಲು ಪ್ರತ್ಯರ್ಜಿದಾರರಿಗೆ ಅವಕಾಶ ನೀಡಲು ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದ್ದಾರೆ. ಅಂತಿಮ ತೀರ್ಮಾನವನ್ನು ಕೈಗೊಂಡ ಈ ನ್ಯಾಯಾಲಯದಿಂದ ಹೊರಡಿಸಲಾದ ಸದರಿ ತೀರ್ಪು ಹಾಗೂ ಆದೇಶದ ಕಾರಣದಿಂದಾಗಿ ಪ್ರಶ್ನೆಯಲ್ಲಿರುವ ವಿಷಯವನ್ನು ಪುನಃ ಪ್ರಾರಂಭಿಸಲಾಯಿತು. ರಿಟ್ ಅರ್ಜಿ ಸಂಖ್ಯೆ 34362/2009 ದಿನಾಂಕ 10.11.2010ರಲ್ಲಿ ಈ ನ್ಯಾಯಾಲಯದಿಂದ ಹೊರಡಿಸಲಾದ ತೀರ್ಪು ಮತ್ತು ಆದೇಶದ ದೃಷ್ಟಿಯಿಂದ ಅರ್ಜಿದಾರನು ಈಗ ಎತ್ತಿದ ಎಲ್ಲಾ ವಾದಗಳನ್ನು ನಿರಾಕರಿಸಬೇಕಿದ್ದು, ಅದರಲ್ಲಿ, “ನಿರ್ದಿಷ್ಟವಾಗಿ, ಪ್ರತಿವಾದಿ ಸಂಖ್ಯೆ 6– ಅರ್ಜಿದಾರನ ಪರ ವಕೀಲರು ಹಾಜರಿರದಿದ್ದ ಮತ್ತು ದಾಖಲೆಗಳನ್ನು ವಿಳಂಬವಾಗಿ ಹಾಜರುಪಡಿಸಿದ್ದ ಹಾಗೂ ಅದೇ ದಿನದಂದು ದಾಖಲೆಗಳನ್ನು ಗುರುತಿಸಲಾಗಿದ್ದ ಕಾರಣದಿಂದ, ನ್ಯಾಯಾಲಯವು ಅಂಥ ವಿವೇಚನೆಯನ್ನು ಬಳಸಿರುವುದಿಲ್ಲವೆಂದು ಸ್ಪಷ್ಟವಾಗಿ ತೀರ್ಮಾನಿಸಿದೆ. ಅರ್ಜಿದಾರನು ಸದರಿ ತೀರ್ಪನ್ನು ಅಂಗೀಕರಿಸಿದ್ದು, ವಾಪಸ್ಸು ಕಳಿಸಿದ ನಂತರ ಅಧಿವಿಚಾರಣಾ ನ್ಯಾಯಾಲಯದ ಮುಂದೆ ವ್ಯವಹರಣೆಗಳಲ್ಲಿ ಭಾಗವಹಿಸಿರುತ್ತಾನೆ. ಈಗ, ತನ್ನ ವಿರುದ್ಧದ ಆದೇಶದಿಂದ ಬಾಧಿತನಾಗಿದ್ದು, ಅರ್ಜಿಯನ್ನು (ಐಎ 9) ಪುರಸ್ಕರಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯದ ಅಧಿಕಾರಗಳನ್ನು ಪ್ರಶ್ನಿಸಿ ಈ ನ್ಯಾಯಾಲಯದ ಮೊರೆಹೋಗಿದ್ದಾನೆ. ದಾಖಲೆಯ ಗುರುತಿಸುವಿಕೆಗೆ ಆಕ್ಷೇಪಿಸಲು ಪ್ರತ್ಯರ್ಜಿದಾರನಿಗೆ ಅವಕಾಶ ಒದಗಿಸಿ ಈ ನ್ಯಾಯಾಲಯವು ಹೊರಡಿಸಿದ ಆದೇಶಗಳ ದೃಷ್ಟಿಯಿಂದ, ಅಜಿದಾರನು ಅವಲಂಬಿಸಿರುವ ತೀರ್ಪುಗಳು, ಈಗಿನ ಪ್ರಕರಣದ ಸಂಗತಿಗಳಿಗೆ ಅನ್ವಯವಾಗುವುದಿಲ್ಲ. ಹಾಗಾಗಿ, ಈ ನ್ಯಾಯಾಲಯವು ನೀಡಿದ ನಿರ್ದೇಶನಗಳ ಮೇರೆಗೆ ಅಧಿವಿಚಾರಣಾ ನ್ಯಾಯಾಲಯವು ಕಾರ್ಯ ನಿರ್ವಹಿಸಿದ್ದು, ಅದರಲ್ಲಿ ತಪ್ಪು ಹುಡುಕಲಾಗುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶಕ್ಕೆ ಯಾವುದೇ ಆಕ್ಷೇಪವನ್ನು ಮಾಡಲಾಗುವುದಿಲ್ಲ. ತದನುಸಾರವಾಗಿ ರಿಟ್ ಅರ್ಜಿಯು ವಜಾಗೊಳ್ಳುತ್ತದೆ.

---